# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ | : | 673 (874) |
| ಸದಸ್ಯರ ಹೆಸರು | : | ಶ್ರೀ ಮಧು ಜಿ ಮಾದೇಗೌಡ (ಪದವೀಧರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 16/12/2024. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು . |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಬಗ್ಗೆ ಸಮೀಕ್ಷೆ ನಡೆಸುವಂತೆ ಇತ್ತೀಚೆಗೆ ಹೈಕೋರ್ಟ್ ಆದೇಶ ನೀಡಿದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಸಮೀಕ್ಷೆ ನಡೆಸಲಾಗಿದೆಯೇ; | ಹೌದು<br>2024-25ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲು ಕೈಗೊಂಡ ಸಮೀಕ್ಷೆ ಕಾರ್ಯವು ಅಂತಿಮ ಹಂತದಲ್ಲಿರುತ್ತದೆ. |
| ಆ) | ಇದ್ದಲ್ಲಿ, ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ ಮಕ್ಕಳ ಒಟ್ಟು ಸಂಖ್ಯೆ ಎಷ್ಟು (ಸಮೀಕ್ಷೆಗೆ ಒಳಪಟ್ಟ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯ ಮಾಹಿತಿಯನ್ನು ಜಿಲ್ಲಾವಾರು ಹಾಗೂ ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ತಾಲ್ಲೂಕುವಾರು ಮಾಹಿತಿ ನೀಡುವುದು) | 2024-25ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲು ಕೈಗೊಂಡಿರುವ ಸಮೀಕ್ಷೆ ಕಾರ್ಯವು ಪ್ರಗತಿಯಲ್ಲಿರುತ್ತದೆ. |
| ಇ) | ಸಮೀಕ್ಷೆ ನಡೆದ ಅವಧಿ, ಭಾಗವಹಿಸಿದ ಗಣತಿದಾರರ ಸಂಖ್ಯೆ , ಸಮೀಕ್ಷೆಗೆ ಒಳಪಡಿಸಿದ ಮಕ್ಕಳ ವಯೋಮಾನ ಇಲಾಖೆಗಳ ಸಹಭಾಗಿತ್ವ, ತಂತ್ರಜ್ಞಾನದ ಬಳಕೆ ಸೇರಿದಂತೆ **ಸಮೀಕ್ಷೆ ಕುರಿತ** ಸಂಪೂರ್ಣ ಮಾಹಿತಿ ನೀಡುವುದು; | • ಸಮೀಕ್ಷೆ ಕಾರ್ಯವು ಜುಲೈ 2024ರಿಂದ ಪ್ರಾರಂಭವಾಗಿ ಇನ್ನೂ ಪ್ರಗತಿಯಲ್ಲಿರುತ್ತದೆ. ಸದರಿ ಸಮೀಕ್ಷೆಯಲ್ಲಿ 6 ರಿಂದ 18 ವರ್ಷ ವಯೋಮಾನದ ಮಕ್ಕಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ.<br>• ಅಂತರ್ ಇಲಾಖಾ ಸಮಿತಿ ಸಭೆಯಲ್ಲಿ(IDCC) ನಿರ್ಣಯಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸಮೀಕ್ಷಾ ಕಾರ್ಯ ಹಮ್ಮಿಕೊಳ್ಳಲಾಗಿದೆ.<br>• ಸಮೀಕ್ಷೆಯು ಹೆಚ್ಚು ಪರಿಣಾಮಕಾರಿ ಹಾಗೂ ಪಾರದರ್ಶಕವಾಗಲು ನಾಗರೀಕ ಸೇವೆಗಳ ಎಲೆಕ್ಟ್ರಾನಿಕ್ ಡೆಲಿವರಿ ನಿರ್ದೇಶನಾಲಯ(EDCS), ಇ-ಆಡಳಿತರವರಿಂದ ಮೊಬೈಲ್ Application ನ್ನು ಅಭಿವೃದ್ಧಿಪಡಿಸಲಾಗಿದೆ. |

| | | |
|---|---|---|
| ಈ) | ಶಾಲೆಯಿಂದ ಹೊರಗುಳಿದAಮಕ್ಕಳನ್ನು ಶಾಲೆಗೆ ವಾಪಸ್ಸು ಕರೆತರಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? | ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ತರಲು ಸರ್ಕಾರವು ಈ ಕೆಳಕಂಡ ಕಾರ್ಯತಂತ್ರಗಳನ್ನು ರೂಪಿಸಿದೆ.<br>• ಮಕ್ಕಳ ಹಾಜರಾತಿಯನ್ನು ಪ್ರೋತ್ಸಾಹಿಸಲು ಸರ್ಕಾರಿ ಮತ್ತು ಅನುದಾನಿತ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಮದ್ಯಾಹ್ನದ ಬಿಸಿಯೂಟ, ಕ್ಷೀರಭಾಗ್ಯ, ಮೊಟ್ಟೆ, ಚಿಕ್ಕಿ, ಬಾಳೆಹಣ್ಣು, ಉಚಿತ ಪಠ್ಯ ಪುಸ್ತಕಗಳು, ಶೂ-ಸಾಕ್ಸ್ ಮತ್ತು 2ಜೊತೆ ಸಮವಸ್ತ್ರ, ಇತ್ಯಾದಿ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br>• ಪ್ರತಿಭಾ ಕಾರಂಜಿ ಕಾರ್ಯಕ್ರಮದಡಿಯಲ್ಲಿ ಶಾಲೆಯಲ್ಲಿರುವ ಎಲ್ಲಾ ಮಕ್ಕಳಿಗೆ ವಿವಿಧ ಹಂತದಲ್ಲಿ ನಡೆಯುವ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವುದು.<br>• ಸಮೀಕ್ಷೆಯಲ್ಲಿ ಗುರುತಿಸಿ ದಾಖಲಾಗದ ಮಕ್ಕಳನ್ನು ವಸತಿ ಸಹಿತ/ವಸತಿ ರಹಿತ, 3/6/12 ತಿಂಗಳ ವಿಶೇಷ ತರಬೇತಿ, ಚಿಣ್ಣರ ತಂಗುಧಾಮ, ಟೆಂಟ್ ಶಾಲೆ ಹಾಗೂ ಚಿಣ್ಣರ ಅಂಗಳ ವಿಶೇಷ ತರಬೇತಿ ಮೂಲಕ ಶೈಕ್ಷಣಿಕ ಮುಖ್ಯವಾಹಿನಿಗೆ ತರಲಾಗುವುದು.<br>• ವಲಸೆ ಮಕ್ಕಳ ಹಾಗೂ ಸಮೀಕ್ಷೆಯಲ್ಲಿ ಗುರುತಿಸಿ ದಾಖಲಾಗದೆ ಉಳಿದ ಮಕ್ಕಳು, ಬೀದಿ ಮಗು / ಚಿಂದಿ ಆಯುವ ಮಗು, ಬಾಲ ಕಾರ್ಮಿಕರಾಗಿರುವುದು, ಮಕ್ಕಳ ಅನಾರೋಗ್ಯ, ವಿಶೇಷ ಚೇತನ ಮಕ್ಕಳು, ಅನಾಥ ಮಗು ಬೇರೆ ರಾಜ್ಯ ಅಥವಾ ಜಿಲ್ಲೆಗಳಿಂದ ವಲಸೆ ಬಂದ ಮಕ್ಕಳನ್ನು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವಸತಿ ಶಾಲೆ (ನೇತಾಜಿ ಆವಾಸಿಯ ವಿದ್ಯಾಲಯ, ಕೆಜಿಬಿವಿ ಶಾಲೆಗಳಲ್ಲಿ ಹಾಗೂ ಚಿಣ್ಣರ ತಂಗುಧಾಮ (Transit Home) ದಾಖಲಿಸಲಾಗುವುದು.<br>• ವಿಶೇಷ ಅಗತ್ಯವುಳ್ಳ-Oosc ಮಕ್ಕಳನ್ನು ಗುರುತಿಸಲಾಗುತ್ತಿದೆ.<br>• ಗುರುತಿಸಲ್ಪಟ್ಟ OoSC ಮಕ್ಕಳಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳ ಚಲನೆಯ ಸಾಮರ್ಥ್ಯ, ಕಲಿಕೆಗೆ ಗ್ರಹಿಕೆಯ ಮಟ್ಟ, ನ್ಯೂನತೆಯ ವಿಧ |

| | | |
|---|---|---|
| | | ಹಾಗೂ ನ್ಯೂನತೆಯ ತೀವ್ರತೆಯನ್ನು ಆಧರಿಸಿ ಅಂತಹ ಮಕ್ಕಳು ಶಾಲೆಗೆ ಹಾಜರಾಗಲು ಸಾಧ್ಯವಿದ್ದಲ್ಲಿ ಶಾಲೆಗೆ ದಾಖಲಾತಿ ಮಾಡಿಕೊಳ್ಳಲಾಗುತ್ತಿದೆ.<br>• ತೀವ್ರತರನಾದ ನ್ಯೂನತೆ ಅಥವಾ ತೀವ್ರತರನಾದ Loco motor disability ಹೊಂದಿದ್ದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಗೃಹಧಾರಿತ ಮಕ್ಕಳೆಂದು ಪರಿಗಣಿಸಿ ಅಗತ್ಯ ಕೌಶಲಗಳ ತರಬೇತಿ ಒದಗಿಸಲಾಗುವುದು.<br>• ವಿಶೇಷ ಅಗತ್ಯವುಳ್ಳ OoSC ಮಕ್ಕಳಿಗೆ ವಿಶೇಷ ಶಿಕ್ಷಕರ ಬೆಂಬಲ ನೀಡಲಾಗುತ್ತಿದೆ. ನ್ಯೂನತೆಯ ಆಧಾರದಲ್ಲಿ ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಭತ್ಯೆಗಳಾದ ಸಾರಿಗೆ ಭತ್ಯೆ, ಬೆಂಗಾವಲು ಭತ್ಯೆ, ಓದುಗರ ಭತ್ಯೆ ಮತ್ತು ಹೆಣ್ಣು ಮಕ್ಕಳ ಭತ್ಯೆ ನೀಡಲಾಗುವುದು ಹಾಗೂ ಸಾಧನ-ಸಲಕರಣೆಗಳನ್ನು ಒದಗಿಸಲಾಗುವುದು. |

**ಸಂಖ್ಯೆ: ಇಪಿ 406 ಪಿಜಿಸಿ 2024**

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು